ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1652
ಮಾನ್ಯ ಸದಸ್ಯರ ಹೆಸರು	:	ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ	:	14/03/2022
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

*****

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ತುಮಕೂರು ಜಿಲ್ಲೆಯು ಐತಿಹಾಸಿಕ ಮತ್ತು ರಮಣೀಯ ಸ್ಥಳಗಳನ್ನು ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಹಾಗಿದ್ದಲ್ಲಿ, ಗುರುತಿಸಿರುವ ಸ್ಥಳಗಳ ಪೂರ್ಣ ವಿವರಗಳನ್ನು ನೀಡುವುದು)	ಹೌದು ಪ್ರವಾಸೋದ್ಯಮ ಇಲಾಖೆಯಿಂದ ತುಮಕೂರು ಜಿಲ್ಲೆಯಲ್ಲಿ ಗುರುತಿಸಿರುವ ಪ್ರವಾಸಿತಾಣಗಳ ವಿವರ ಈ ಕೆಳಗಿನಂತಿದೆ. (ಕೆಳಗಿನ ಕೋಷ್ಟಕ)

ಕ್ರ. ಸಂ.	ತಾಲ್ಲೂಕು	ಪ್ರವಾಸಿ ತಾಣಗಳು	ಪ್ರವಾಸಿ ತಾಣಗಳ ಸಂಖ್ಯೆ
1	ತುಮಕೂರು	ಸಿದ್ಧಗಂಗ, ಕೈದಾಳ, ದೇವರಾಯನದುರ್ಗ, ನಾಮದ ಚಿಲುಮೆ	04
2	ಕೊರಟಗೆರೆ	ಕೊರಟಗೆರೆ, ಸಿದ್ಧರಬೆಟ್ಟ, ತೀತಾ ಜಲಾಶಯ, ಚೆನ್ನರಾಯನದುರ್ಗ ಕೋಟೆ	04
3	ಶಿರಾ	ಕಸ್ತೂರಿ ರಂಗಪ್ಪನಾಯಕ ಕೋಟೆ	01
4	ಕುಣಿಗಲ್	ಯಡಿಯೂರು, ಮಾರ್ಕೋನಹಳ್ಳಿ, ಹುತ್ರಿದುರ್ಗ ಬೆಟ್ಟ, ಹುಲಿಯೂರು ದುರ್ಗ ಬೆಟ್ಟ, ಕುಣಿಗಲ್ ಕೆರೆ	05
5	ಪಾವಗಡ	ಪಾವಗಡ	01
6	ಮಧುಗಿರಿ	ನಿಡಗಲ್, ಮಧುಗಿರಿ ಏಕಶಿಲಾ ಬೆಟ್ಟ, ಭಸ್ಮಾಂಗಿ ಬೆಟ್ಟ	03
7	ತಿಪಟೂರು	ಅರಳಗುಪ್ಪ	01
8	ಗುಬ್ಬಿ	ಗುಬ್ಬಿ	01
9	ತುರುವೇಕರೆ	ತುರುವೇಕರೆ	01
10	ಚಿಕ್ಕನಾಯಕನಹಳ್ಳಿ	ಹಂದನಕೆರೆ, ಬೊರನಕಣಿವೆ ಜಲಾಶಯ	02
		ಒಟ್ಟು	23

ಕ್ರ. ಸಂ.	ಪ್ರಶ್ನೆ	ಉತ್ತರ
ಆ)	ಜಿಲ್ಲೆಯಲ್ಲಿ ಗುರುತಿಸಿರುವ ಸ್ಥಳಗಳಲ್ಲಿ ರಾಜ್ಯ ಸರ್ಕಾರದ ಇಲಾಖೆ ಮತ್ತು ನಿಗಮಗಳಿಂದ ಯಾತ್ರಿಕರಿಗೆ ಕಲ್ಪಿಸಿರುವ ಸೌಲಭ್ಯಗಳು ಯಾವುವು; (ಪೂರ್ಣ ವಿವರ ನೀಡುವುದು)	ಪ್ರವಾಸೋದ್ಯಮ ಇಲಾಖೆಯಿಂದ ಗುರುತಿಸಿರುವ ಪ್ರವಾಸಿ ತಾಣಗಳಲ್ಲಿ ಹಾಗೂ ಇತರೆ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಯಾತ್ರಿನಿವಾಸ, ಡಾರ್ಮಿಟರಿ, ಶುದ್ಧ ಕುಡಿಯುವ ನೀರಿನ ಸೌಲಭ್ಯ (ಆರ್.ಓ. ಪ್ಲಾಂಟ್), ಶೌಚಾಲಯ ಮತ್ತು ಸ್ನಾನಗೃಹ, ಪಾರ್ಕಿಂಗ್ ಸೌಲಭ್ಯ, ಪ್ರವಾಸಿ ಸೂಚನಾ ಫಲಕಗಳು, ಆಸನಗಳ ವ್ಯವಸ್ಥೆ, ಮೆಟ್ಟಿಲುಗಳ ನಿರ್ಮಾಣ, ರೈಲಿಂಗ್ಸ್ ಪರಗೋಲ, ಪಾತ್ ವೇ ನಿರ್ಮಾಣ ಮತ್ತು ಅಂತಿಮ ಹಂತದ ಕೂಡು ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಪ್ರವಾಸೋದ್ಯಮ ಇಲಾಖೆಯಿಂದ ಪರಿಶೀಲಿಸಿ ಅನುದಾನದ ಲಭ್ಯತೆಗೆ ಅನುಗುಣವಾಗಿ ಕೈಗೊಳ್ಳಲಾಗುತ್ತದೆ.

ಇ)	ಜಿಲ್ಲೆಯಲ್ಲಿನ ಸುಪ್ರಸಿದ್ಧ, ಐತಿಹಾಸಿಕ ಮತ್ತು ರಮಣೀಯ ಕೇಂದ್ರಗಳನ್ನು ಒಳಗೊಂಡ ಒಂದು ಪ್ರವಾಸಿ ಸರ್ಕ್ಯೂಟ್ ಅನ್ನು ಅಭಿವೃದ್ಧಿಪಡಿಸುವಂತೆ ಮತ್ತು ತುಮಕೂರು ಜಿಲ್ಲೆ ಕಲ್ಪತರು ಪ್ರವಾಸಿ ಸರ್ಕ್ಯೂಟ್ ಸಮಿತಿ ರಚಿಸುವಂತೆ ತುಮಕೂರು ಜಿಲ್ಲಾಧಿಕಾರಿಯವರಿಂದ ದಿನಾಂಕ: 30.12.2020 ರಂದು ಒಂದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುವುದು ನಿಜವೇ:	ಹೌದು "ತುಮಕೂರು ಜಿಲ್ಲೆ ಕಲ್ಪತರು ಪ್ರವಾಸಿ ಸರ್ಕ್ಯೂಟ್ ಸಮಿತಿ" ಎಂಬ ಪದನಾಮದಲ್ಲಿ ಜಿಲ್ಲೆಯ ಎಲ್ಲಾ ಶಾಸಕರು, ಲೋಕಸಭಾ ಸದಸ್ಯರು, ಆಯಾ ತಾಲ್ಲೂಕಿನ ಎಲ್ಲಾ ಸ್ಥಳೀಯ ಜನಪ್ರತಿನಿಧಿಗಳು, ಸಂಬಂಧಿತ ಇಲಾಖೆಯ ಮುಖ್ಯಸ್ಥರು ಒಳಗೊಂಡಂತೆ ಒಂದು ಸಮಿತಿಯನ್ನು ರಚಿಸುವಂತೆ ಹಾಗೂ ಆರ್ಥಿಕ ನೆರವು ನೀಡಲು ರೂ.15.00 ಕೋಟಿ ಬಿಡುಗಡೆ ಮಾಡಲು ಕೋರಿರುತ್ತಾರೆ. ಬಂಡವಾಳ ವೆಚ್ಚ ಲೆಕ್ಕಶೀರ್ಷಿಕೆಯಡಿ ಇಲಾಖೆಗೆ 2020-21ನೇ ಸಾಲಿನಲ್ಲಿ ರೂ.35.00 ಕೋಟಿಗಳನ್ನು ಹಾಗೂ 2021-22ನೇ ಸಾಲಿನಲ್ಲಿ ರೂ.71.00 ಕೋಟಿ ಅನುದಾನವನ್ನು ಮಾತ್ರ ಆಯವ್ಯಯದಲ್ಲಿ ಒದಗಿಸಲಾಗಿದ್ದು, ಈ ಅನುದಾನವನ್ನು ಮುಂದುವರೆದ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ. ಆದ್ದರಿಂದ, 2020-21 ಹಾಗೂ 2021-22ನೇ ಸಾಲಿನಲ್ಲಿ ಅನುದಾನದ ಕೊರತೆಯಿಂದ ಈ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಾಗಿರುವುದಿಲ್ಲ.
ಈ)	ಹಾಗಿದ್ದಲ್ಲಿ, ಈ ಪ್ರಸ್ತಾವನೆಯ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಪೂರ್ಣ ವಿವರ ನೀಡುವುದು)	

ಸಂಖ್ಯೆ: ಟಿಓಆರ್ 113 ಟಿಡಿವಿ 2022

(ಆನಂದ್ ಸಿಂಗ್)
ಪ್ರವಾಸೋದ್ಯಮ, ಜೀವಿಶಾಸ್ತ್ರ,
ಮತ್ತು ಪರಿಸರ ಸಚಿವರು